ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 7

Total No. of Questions : 26 ] [ Total No. of Printed Pages : 7

**ಸಂಕೇತ ಸಂಖ್ಯೆ : 244-K (NS)**

**Code No. : 244-K (NS)**

# ಡಿ.ಇಡಿ. ದ್ವಿತೀಯ ವರ್ಷ

# D.Ed. SECOND YEAR

# ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ.)
# ಪ್ರಥಮ ಭಾಷೆ – ಕನ್ನಡ

# FACILITATING LEARNING ( HPS )
# FIRST LANGUAGE — KANNADA

**(ಹೊಸ ಪಠ್ಯವಸ್ತು)**

**(New Syllabus)**

ದಿನಾಂಕ : 15. 05. 2019 ]

Date : 15. 05. 2019 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ] [ ಗರಿಷ್ಠ ಅಂಕಗಳು : 60

Time : 2.00 P.M. to 5.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*

*Register Number of the Candidate*

***ಸೂಚನೆಗಳು :***

i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು 3 ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

## ಭಾಗ – I

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ :** $10 \times 1 = 10$

1. ಮಗುವಿಗೆ ಮೊದಲ ಪಾಠಶಾಲೆ

(A) ಪರಿಸರ (B) ಮನೆ

(C) ಶಾಲೆ (D) ಭಾಷೆ

2. ಎಲ್ಲಾ ವಿಧದ ಅಭ್ಯಾಸಿಗಳಿಗೆ ನಿಲುಕುವಂಥ ಔಪಚಾರಿಕ ವಾಕ್ಯಗಳಿರುವ ಕನ್ನಡ

(A) ಆಡುನುಡಿ

(B) ಗ್ರಾಂಥಿಕ ಕನ್ನಡ

(C) ಪ್ರಾದೇಶಿಕ ಕನ್ನಡ

(D) ಗ್ರಾಮ್ಯ ಕನ್ನಡ

3. ...................... ಸಿದ್ಧಾಂತವನ್ನು ಆಧರಿಸಿದ ಬೋಧನಾ ಕಲಿಕಾ ಪ್ರಕ್ರಿಯೆಗೆ 5E ಮಾದರಿಯು ಸೂಕ್ತವಾಗಿದೆ.

(A) ಬ್ಲೂಮರನವಾದ

(B) ಪ್ರತ್ಯಕ್ಷವಾದ

(C) ರಚನಾವಾದ

(D) ಸಮೀಕ್ಷವಾದ

4. ವ್ಯಾಕರಣ ಬೋಧನೆಯ ಉದ್ದೇಶ ಇದಾಗಿದೆ

(A) ಭಾಷೆಯನ್ನು ಕಲಿಯುವುದು

(B) ಓದುಗಾರಿಕೆಗೆ

(C) ಬರವಣಿಗೆಗೆ

(D) ಭಾಷೆಯ ಸಾಧ್ಯತೆಗಳನ್ನು ಪರಿಶೀಲಿಸುವುದು

5. ಇದು ಭಾಷಾ ಕಲಿಕೆಯ ಉದ್ದೇಶವಾಗಿದೆ

I. ಭಾವನೆಗಳನ್ನು ವ್ಯಕ್ತಪಡಿಸುವುದು

II. ಪದಗಳನ್ನು ಉಚ್ಛರಿಸುವುದು

III. ಅನ್ಯ ಭಾಷೆಗಳನ್ನು ತಿರಸ್ಕರಿಸುವುದು

IV. ವಿಚಾರಗಳನ್ನು ಹಂಚಿಕೊಳ್ಳುವುದು

*ಇವುಗಳಲ್ಲಿ :*

(A) I ಮತ್ತು IV ಸರಿ ಉತ್ತರ (B) II ಮತ್ತು III ಸರಿ ಉತ್ತರ

(C) II ಮತ್ತು IV ಸರಿ ಉತ್ತರ (D) I ಮತ್ತು III ಸರಿ ಉತ್ತರ

6. ಮಕ್ಕಳು ತಮ್ಮತಮ್ಮ ಅಭಿಪ್ರಾಯಗಳನ್ನು ತರಗತಿಗಳಲ್ಲಿ ವ್ಯಕ್ತಪಡಿಸಲು ಅವರು

(A) ಸ್ವತಂತ್ರ ಕಲಿಕಾರ್ಥಿಗಳು

(B) ಮಂದ ಕಲಿಕಾರ್ಥಿಗಳು

(C) ನಿರಾಶ್ರಿತರು

(D) ಆಶ್ರಿತರು

7. ಭಾಷಾ ಶಿಕ್ಷಕರಾದ ನಮ್ಮ ಗುರಿ

(A) ಅಂದಿನ ಪಾಠವನ್ನು ಅಂದೇ ಮುಗಿಸುವುದು

(B) ಭಾಷಾ ಕಲಿಕೆ

(C) ಸಹಶಿಕ್ಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು

(D) ಇತರ ವಿಷಯಗಳ ಕಡೆಗೆ ಗಮನ ನೀಡುವುದು

8. 'ಗಾದೆಗಳ ವಿಸ್ತರಣೆ' ಈ ಚಟುವಟಿಕೆ ಮಗುವಿನ ......................ನ್ನು ಸಾದರಪಡಿಸುತ್ತದೆ.

(A) ಗಟ್ಟಿ ಓದುವಿಕೆ (B) ಚಿಂತನೆ

(C) ಈಜುವುದು (D) ಮನಸ್ಸಿಗೆ ಬಂದಂತೆ ಗೀಚುವುದು

9. ಇದು ಲೇಖನದ ವಿವರ ಮತ್ತು ಸಾರವನ್ನು ತಿಳಿಸುವುದು

(A) ಬರವಣಿಗೆ (B) ಓದುಗಾರಿಕೆ

(C) ಕಂಠಪಾಠ (D) ಗ್ರಹಿಸುವಿಕೆ

10. ಒಂದು ಪೂರ್ಣ ವಾಕ್ಯವು ಈ ಅಂಶಗಳನ್ನು ಒಳಗೊಂಡಿರಬೇಕು

(A) ಕರ್ತೃ–ಕ್ರಿಯಾಪದ (B) ಕರ್ಮ–ಸರ್ವನಾಮ

(C) ಕ್ರಿಯಾಪದ–ನಾಮಪದ (D) ಕರ್ತೃ, ಕರ್ಮ–ಕ್ರಿಯಾಪದ

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ :** $5 \times 2 = 10$

11. VI ನೇ ತರಗತಿಯ ಯಾವುದಾದರೊಂದು ಗದ್ಯಪಾಠಕ್ಕೆ ಸಂಬಂಧಿಸಿದಂತೆ ಕನಿಷ್ಠ ನಾಲ್ಕು ಕಲಿಕಾಂಶಗಳನ್ನು ಪಟ್ಟಿ ಮಾಡಿ.

12. ಆಂಗಿಕಾಭಿನಯ ಮತ್ತು ಭಾವಾಭಿವ್ಯಕ್ತಿಗಳಲ್ಲಿ ನಾಟಕವು ಒಂದು ಪ್ರಮುಖ ಸಾಹಿತ್ಯ ಪ್ರಕಾರವಾಗಿದೆ. ಹೇಗೆ ? ವಿವರಿಸಿ.

13. ಕಲಿಕೆಯಲ್ಲಿ ಹಿಂದುಳಿದ ಮಗು ನಿಮ್ಮ ತರಗತಿಯಲ್ಲಿ ಕಂಡುಬಂದರೆ ಹೇಗೆ ಅನುಕೂಲಿಸಿ ಕಲಿಸುವಿರಿ ?

14. ಕಲಿಯುವವರನ್ನು ಉತ್ತಮ ಓದುಗರನ್ನಾಗಿ ತಯಾರಿಸಲು ಸುಗಮಕಾರರು ಕೈಕೊಳ್ಳಬೇಕಾದ ಕೆಲವು ಅಂಶಗಳನ್ನು ತಿಳಿಸಿ.

15. ಸೃಜನಶೀಲತೆ ಎಂದರೇನು ? ಅದನ್ನು ವೃದ್ಧಿಸಲು ಶಿಕ್ಷಕರು ಯಾವ ಚಟುವಟಿಕೆ ಕೈಗೊಳ್ಳಬೇಕು ತಿಳಿಸಿ.

16. VI ನೇ ತರಗತಿಯ ವಿದ್ಯಾರ್ಥಿ ನಾಮಪದದ ಅರ್ಥ ತಿಳಿದಿರುವುದಾಗಿ ಹೇಳುತ್ತಾನೆ/ಳೆ. ಅವನು/ಳು ನಾಮಪದದ ಪ್ರತಿಯೊಂದು ವಿಧವನ್ನು ತಿಳಿಯಬಹುದೆಂದು ನಿರೀಕ್ಷಿಸುತ್ತಾನೆ/ಳೆ. ನೀವು ಅವರಿಗೆ ನಾಮಪದಗಳ ಪ್ರತಿಯೊಂದು ವಿಧವನ್ನು ಬೋಧಿಸುತ್ತೀರಿ. ನಂತರ ವಿದ್ಯಾರ್ಥಿ ಈ ಅಂಶಗಳನ್ನು ತನ್ನ KWL ನ ಕಾಲಂನಲ್ಲಿ ಗುರುತಿಸುತ್ತಾನೆ/ಳೆ. ಅವನ/ಳ KWL ನಕ್ಷೆಯ ಮೂರು ಕಾಲಂಗಳಲ್ಲಿ ಇರುವ ಅಂಶಗಳನ್ನು ಬರೆಯಿರಿ.

17. ಸಣ್ಣಕಥೆ ಮತ್ತು ನಾಟಕಗಳಿಗಿರುವ ನಾಲ್ಕು ವ್ಯತ್ಯಾಸಗಳನ್ನು ಬರೆಯಿರಿ.

18. ಸಾಹಿತ್ಯ ಎಂದರೇನು ? ಅದರಿಂದಾಗುವ ನಾಲ್ಕು ಪ್ರಯೋಜನಗಳನ್ನು ಬರೆಯಿರಿ.

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ 'ಅ' ಮತ್ತು 'ಆ' ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ :** 8 × 5 = 40

19. ಅ) "ಅನುಭವ ಇರುವಲ್ಲಿ ಅಮೃತವಿದೆ." ಈ ನುಡಿಮುತ್ತನ್ನು ಸೂಕ್ತ ಉದಾಹರಣೆಗಳೊಂದಿಗೆ ಬರೆಯಿರಿ.

*ಅಥವಾ*

ಆ) ಈ ಕೆಳಗಿನ ಕಥಾಂಶ ನೋಡಿ ಒಂದು ಪುಟದಷ್ಟು ಕಥೆ ರಚಿಸಿ, ತಲೆಬರಹ (ಶೀರ್ಷಿಕೆ)ಯನ್ನು ನೀಡಿ :

ತಾಯಿಯೊಬ್ಬಳು ತನ್ನ ಕಂದನನ್ನು ಮಲಗಿಸಿ ನೀರಿಗೆ ಹೋದಾಗ ಹಾವೊಂದು ಮನೆಯಲ್ಲಿ ಬಂದಿತ್ತು. ಬೆಕ್ಕು ಅದನ್ನು ಕಚ್ಚಿ ಕೊಂದಿತ್ತು. ತಾಯಿ ಬೆಕ್ಕನ್ನು ನೋಡಿ ಅದನ್ನು ಕೊಂದುಹಾಕಿದಳು. ಮಗು ತೊಟ್ಟಿಲಲ್ಲಿ ನಗುತ್ತಾ ಆಡುತ್ತಿತ್ತು.

20. ಅ) ಸಂಪನ್ಮೂಲಗಳು ಭಾಷಾ ಕಲಿಕೆಯನ್ನು ಹೇಗೆ ಉತ್ತಮಗೊಳಿಸುತ್ತವೆ ?

*ಅಥವಾ*

ಆ) ಭಾಷೆಯು ನಮ್ಮ ದೈನಂದಿನ ಜೀವನದಲ್ಲಿ ಹೇಗೆ ಉಪಯೋಗಕಾರಿಯಾಗಿದೆ ಎಂಬುದನ್ನು ನಿದರ್ಶನಗಳೊಂದಿಗೆ ಬರೆಯಿರಿ.

21. ಅ) ಮಗುವಿನ ಕಲಿಕೆಯನ್ನು ಅಭಿವೃದ್ಧಿಪಡಿಸುವಲ್ಲಿ ಭಾಷೆಯು ಆಪ್ತಸಂಗಾತಿಯಾಗಿದೆ. ಹೇಗೆ ?

***ಅಥವಾ***

ಆ) ನಿಮ್ಮ ತರಗತಿಯಲ್ಲಿ ಆಶುಭಾಷಣ ಸ್ಪರ್ಧೆಯನ್ನು ಏರ್ಪಡಿಸುವಾಗ ಮೌಲ್ಯಮಾಪನ ಮಾಡಲು ಬಳಸುವ ತಪಶೀಲು ಪಟ್ಟಿಯ ಕೋಷ್ಟಕವನ್ನು ತಯಾರಿಸಿ.

22. ಅ) 5E ಸಿದ್ಧಾಂತ ಆಧರಿಸಿದ ವಿಧಾನದಲ್ಲಿ VII ನೇ ತರಗತಿಯ ಯಾವುದಾದರೂ ಒಂದು ಘಟಕಕ್ಕೆ ಎಲ್ಲಾ ಹಂತಗಳನ್ನಾಧರಿಸಿ ಒಂದು ಪಾಠಯೋಜನೆಯನ್ನು ತಯಾರಿಸಿ.

***ಅಥವಾ***

ಆ) ಮಾಧ್ಯಮಗಳಲ್ಲಿ ಬಳಸುವ ಭಾಷೆಯನ್ನು ಮೀರಿ ಶಿಕ್ಷಕರು ವಿದ್ಯಾರ್ಥಿಗಳನ್ನು ಹೇಗೆ ಬೆಳೆಸಬೇಕೆಂಬುದನ್ನು ನಿಮ್ಮ ಮಾತಿನಲ್ಲಿ ಸ್ಪಷ್ಟಪಡಿಸಿ.

23. ಅ) V ನೇ ತರಗತಿಯಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಬರವಣಿಗೆ ಕಾರ್ಯದಲ್ಲಿ ತೊಡಗಿಸಲು ಕೈಗೊಳ್ಳುವ ತಂತ್ರಗಳಾವುವು ? ಎರಡು ತಂತ್ರಗಳನ್ನು ಕುರಿತು ವಿವರಣೆ ನೀಡಿ.

***ಅಥವಾ***

ಆ) "ಒಂದು ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಸಹಜತೆಯ ಸನ್ನಿವೇಶದಲ್ಲಿ ಅಭಿವ್ಯಕ್ತಿಯ ಮಿತಿಗಳನ್ನು ಮೀರದಂತೆ ತಮ್ಮ ಅನುಭವಗಳನ್ನು ನೀಡುವುದು ಸೂಕ್ತವಾದುದು." ಹೇಗೆ ? ವಿವರಿಸಿ.

24. ಅ) ಪ್ರಾಥಮಿಕ ಶಾಲಾ ಶಿಕ್ಷಕರಾದ ನೀವು VII ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಮೌಖಿಕ ಅಭಿವ್ಯಕ್ತಿಯನ್ನು ಅಭಿವೃದ್ಧಿಪಡಿಸಲು ಯಾವ ಚಟುವಟಿಕೆಗಳನ್ನು ಆಯೋಜಿಸುವಿರಿ ? ಅವುಗಳಲ್ಲಿ ಎರಡನ್ನು ವಿವರಿಸಿ.

***ಅಥವಾ***

ಆ) ಒಳಗೊಳ್ಳುವ ತರಗತಿಗಳಲ್ಲಿ ಕಲಿಕಾದೋಷ ಹಾಗೂ ಶ್ರವಣದೋಷ ಹೊಂದಿರುವ ವಿದ್ಯಾರ್ಥಿಗಳನ್ನು ಅನುಕೂಲಿಸುವಲ್ಲಿ ಯಾವ ಚಟುವಟಿಕೆಗಳನ್ನು ಆಯೋಜಿಸುತ್ತೀರಿ ?

25. ಅ) ಮಕ್ಕಳಲ್ಲಿ ಓದುವಿಕೆಯನ್ನು ಪ್ರೋತ್ಸಾಹಿಸಲು ಓದುಗರ ಕ್ಲಬ್ ಹಾಗೂ ಶಾಲಾ ಗ್ರಂಥಾಲಯದ ಮಹತ್ವಗಳನ್ನು ವಿವರಿಸಿ.

***ಅಥವಾ***

ಆ) ನಿಬಂಧ ಮತ್ತು ಪ್ರಬಂಧಗಳಿಗಿರುವ ವ್ಯತ್ಯಾಸಗಳನ್ನು ವಿವರಿಸಿ.

26. ಅ) ಕಲಿಕಾ ಸಾಧನವನ್ನಾಗಿ ಬರವಣಿಗೆಯನ್ನು ಬಳಸಬಹುದೆ ? ಸ್ಪಷ್ಟೀಕರಿಸಿ.

***ಅಥವಾ***

ಆ) ಆಲೋಚನೆಗಳನ್ನು ಸಂಘಟಿಸಲು ರೇಖನ ಸಂಯೋಜಕ (ಗ್ರಾಫಿಕ್ ಆರ್ಗನೈಸರ್) ಸಹಾಯಕವೇ ? ನಿಮ್ಮ ಉತ್ತರವನ್ನು ಒಂದು ರೇಖನ ಸಂಯೋಜಕವನ್ನು ರಚಿಸುವುದರ ಮೂಲಕ ಸಮರ್ಥಿಸಿ.